## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** 2020-21ನೇ ಸಾಲಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಕಾರ್ಯಕ್ರಮಗಳಿಗೆ ಬಿಡುಗಡೆಯಾದ ಅನುದಾನದಲ್ಲಿ ಉಳಿಕೆಯಾಗಿರುವ ಅನುದಾನವನ್ನು COMED-K ಮತ್ತು MANAGEMENT QUOTA ಅಡಿ ಆಯ್ಕೆಗೊಂಡಿರುವ ವಿದ್ಯಾರ್ಥಿಗಳ ಶುಲ್ಕ ಮರುಪಾವತಿಗೆ ಬಳಸಲು ಹಾಗೂ 2021-22ನೇ ಸಾಲಿನ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ ಕಾರ್ಯಕ್ರಮಗಳಿಗೆ ವಿನಿಯೋಗಿಸಲು ಅನುಮತಿ ನೀಡುವ ಬಗ್ಗೆ.

**ಓದಲಾಗಿದೆ:-**

1. ಸರ್ಕಾರದ ಪತ್ರ ಸಂಖ್ಯೆ: ಬಿಸಿಡಬ್ಲ್ಯೂ 322 ಬಿಎಂಎಸ್ 2021 ದಿನಾಂಕ:03.07.2021.
2. ಸರ್ಕಾರದ ಆದೇಶ ಸಂಖ್ಯೆ: ಬಿಸಿಡಬ್ಲ್ಯೂ 28 ಬಿಎಂಎಸ್ 2022 ದಿನಾಂಕ:07.02.2022.
3. ಸರ್ಕಾರದ ಆದೇಶ ಸಂಖ್ಯೆ:ಬಿಸಿಡಬ್ಲ್ಯೂ 50 ಬಿಎಂಎಸ್ 2022, ದಿನಾಂಕ:21.02.2022.
4. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಇವರ ಪ್ರಸ್ತಾವನೆ ಸಂಖ್ಯೆ:ಹಿಂವಕಇ/ವಿವೇ/ಸಿಆರ್-28/2020-21, ದಿನಾಂಕ:10.02.2022.

******

**ಪ್ರಸ್ತಾವನೆ:-**

ಮೇಲೆ ಓದಲಾದ (1)ರ ಪತ್ರದಲ್ಲಿ 2020-21ನೇ ಸಾಲಿನಲ್ಲಿ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಹಾಗೂ ಶುಲ್ಕ ಮರುಪಾವತಿ ಯೋಜನೆಗಳ ಅನುಷ್ಠಾನಕ್ಕೆ ಒದಗಿಸಿರುವ ರೂ.525.00ಕೋಟಿಗಳ ಅನುದಾನವನ್ನು ಶುಲ್ಕ ಮರುಪಾವತಿ ಯೋಜನೆಗೆ ಮಾರ್ಗಸೂಚಿಗಳಂತೆ ನಿಯಮಾನುಸಾರ ವಿನಿಯೋಗಿಸಿ ರಾಜ್ಯ ವಿದ್ಯಾರ್ಥಿವೇತನ ಪೋರ್ಟಲ್ ಮುಖಾಂತರ ನೇರವಾಗಿ ಅರ್ಹ ವಿದ್ಯಾರ್ಥಿಗಳ ಆಧಾರ್ ಜೋಡಣೆಯಾಗಿರುವ ಬ್ಯಾಂಕ್ ಖಾತೆಗೆ ವರ್ಗಾಯಿಸಲು ಸರ್ಕಾರದ ಅನುಮತಿ ನೀಡಲಾಗಿರುತ್ತದೆ.

ಮೇಲೆ ಓದಲಾದ (2)ರ ಆದೇಶದಲ್ಲಿ 2021-22ನೇ ಸಾಲಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್-ನಂತರದ ವಿದ್ಯಾರ್ಥಿವೇತನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಆಯವ್ಯಯದಲ್ಲಿ ಒದಗಿಸಿದ ಒಟ್ಟು ರೂ. 606.53ಕೋಟಿಗಳ ಅನುದಾನವನ್ನುಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಹೆಸರಿನಲ್ಲಿ ನಿಯಮಾನುಸಾರ ತೆರೆಯುವ ಹೊಸ ಬ್ಯಾಂಕ್ ಉಳಿತಾಯ ಖಾತೆಗೆ ಜಮಾ ಮಾಡಿ, ನಂತರ ಸದರಿ ಅನುದಾನವನ್ನು ರಾಜ್ಯ ವಿದ್ಯಾರ್ಥಿವೇತನ ಪೋರ್ಟಲ್ (ಎಸ್.ಎಸ್.ಪಿ) ಮುಖಾಂತರ ಕರೆಯಲಾಗಿರುವ ಕೇಂದ್ರ ಪುರಸ್ಕೃತ ಮೆಟ್ರಿಕ್-ನಂತರದ ವಿದ್ಯಾರ್ಥಿವೇತನ ಕಾರ್ಯಕ್ರಮ, ವಿದ್ಯಾಸಿರಿ ಊಟ ಮತ್ತು ವಸತಿ ಸಹಾಯ ಯೋಜನೆ, ಶುಲ್ಕ ಮರುಪಾವತಿ ಯೋಜನೆ, ಮೆಟ್ರಿಕ್-ನಂತರದ ವಿದ್ಯಾರ್ಥಿವೇತನ ಕಾರ್ಯಕ್ರಮ (NT/SNT) ಯೋಜನೆಗಳ ಅರ್ಜಿಗಳ ಅರ್ಹತೆಯಂತೆ ವಿದ್ಯಾರ್ಥಿಗಳಿಗೆ ನಿಯಮಾನುಸಾರ ನೇರವಾಗಿ ಅವರ ಆಧಾರ ಜೋಡಣೆಯಾಗಿರುವ ಬ್ಯಾಂಕ್ ಖಾತೆಗೆ ಡಿಬಿಟಿ ಮೂಲಕ ಪಾವತಿಸಲು ಷರತ್ತುಗಳಿಗೊಳಪಟ್ಟು ಸರ್ಕಾರದ ಅನುಮತಿ ನೀಡಿ ಆದೇಶಿಸಲಾಗಿರುತ್ತದೆ.



14/03/22

ಮೇಲೆ ಓದಲಾದ (3)ರ ಆದೇಶದಲ್ಲಿ 2021-22ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ ಹೊಸ ವಿದ್ಯಾರ್ಥಿನಿಲಯಗಳ ಪ್ರಾರಂಭ ಮತ್ತು ನಿರ್ವಹಣೆ ಲೆಕ್ಕಶೀರ್ಷಿಕೆ: 2225-03-277-2-53 ಅಬ್ಜೆಕ್ಟೀವ್ ಕೋಡ್-059 (ಇತರೆ ಖರ್ಚುಗಳು) ರಡಿ ರೂ.466.50ಲಕ್ಷಗಳು ಹಾಗೂ ಅದೇ ಲೆಕ್ಕಶೀರ್ಷಿಕೆಯ ಅಬ್ಜೆಕ್ಟೀವ್ ಕೋಡ್-034 (ಗುತ್ತಿಗೆ/ಹೊರಗುತ್ತಿಗೆ)ರಡಿ ರೂ.2082.75 ಲಕ್ಷಗಳು ಹೀಗೆ ಒಟ್ಟು ರೂ.2549.25 ಲಕ್ಷಗಳನ್ನು ಮೆಟ್ರಿಕ್-ಪೂರ್ವ ವಿದ್ಯಾರ್ಥಿವೇತನ ಕಾರ್ಯಕ್ರಮ ಲೆಕ್ಕಶೀರ್ಷಿಕೆ: 2225-03-277-2-52 ಅಬ್ಜೆಕ್ಟೀವ್ ಕೋಡ್-117 (ವಿದ್ಯಾರ್ಥಿವೇತನ ಮತ್ತು ಪ್ರೋತ್ಸಾಹ) ರಡಿ ಪುನರ್ವಿನಿಯೋಗ ಮಾಡಿರುವ ಹಿನ್ನಲೆಯಲ್ಲಿ ಸದರಿ ಲೆಕ್ಕಶೀರ್ಷಿಕೆ: 2225-03-277-2-52 ಅಬ್ಜೆಕ್ಟೀವ್ ಕೋಡ್-117 ರಲ್ಲಿ ಲಭ್ಯವಿರುವ ರೂ.2549.25ಲಕ್ಷಗಳನ್ನು ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರಿಗೆ ಷರತ್ತಿಗಳಿಗೊಳಪಟ್ಟು ಬಿಡುಗಡೆ ಮಾಡಿ ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ (4)ರ ಆಯುಕ್ತರ ಪ್ರಸ್ತಾವನೆಯಲ್ಲಿ 2020-21ನೇ ಸಾಲಿನಲ್ಲಿ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನದ ಕಾರ್ಯಕ್ರಮದಡಿ ಬಿಡುಗಡೆಯಾದ ಅನುದಾನವನ್ನು ಬ್ಯಾಂಕ್ ಖಾತೆಗೆ ಜಮಾ ಮಾಡಿಕೊಂಡು ಸದರಿ ಸಾಲಿನಲ್ಲಿ ಅರ್ಹವಿರುವ ವಿದ್ಯಾರ್ಥಿಗಳಿಗೆ ಪಾವತಿಸಲಾಗುತ್ತಿರುತ್ತದೆ. ಪ್ರಸ್ತುತ ಸದರಿ ಮೊತ್ತದಲ್ಲಿ ಒಟ್ಟು ರೂ.9886.04ಲಕ್ಷಗಳ ಮೊತ್ತವು ಬ್ಯಾಂಕ್ ಖಾತೆಯಲ್ಲಿ ಬಾಕಿ ಉಳಿದಿದ್ದು, COMED-K ಮತ್ತು MANAGEMENT QUOTA ಅಡಿ ಆಯ್ಕೆಗೊಂಡಿರುವ ಒಟ್ಟು 43,955 ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿಗೆ ಬಳಸಲು ಅವಶ್ಯವಿರುವ ಮೊತ್ತ ರೂ.6836.66ಲಕ್ಷಗಳನ್ನು ವಿನಿಯೋಗಿಸಿಕೊಳ್ಳಲು ಹಾಗೂ ಶುಲ್ಕ ವಿನಾಯಿತಿ ಪಾವತಿಸಿದ ನಂತರ ಅಂದಾಜು ರೂ.3049.38ಲಕ್ಷಗಳ ಉಳಿಕೆಯಾಗುವ ಸಾದ್ಯತೆಯಿದ್ದು, ಸದರಿ ಉಳಿಕೆಯಾಗುವ ಅನುದಾನವನ್ನು 2021-22ನೇ ಸಾಲಿನ ಮೆಟ್ರಿಕ್-ಪೂರ್ವ ವಿದ್ಯಾರ್ಥಿವೇತನ ಕಾರ್ಯಕ್ರಮದಡಿ ನವೀಕರಣ ವಿದ್ಯಾರ್ಥಿಗಳಿಗೆ ವಿನಿಯೋಗಿಸಿಕೊಳ್ಳಲು ಅನುಮತಿ ನೀಡುವಂತೆ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಬಿಸಿಡಬ್ಲ್ಯೂ 809 ಬಿಎಂಎಸ್ 2021,**
**ಬೆಂಗಳೂರು, ದಿನಾಂಕ: 14.03.2022**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, 2020-21ನೇ ಸಾಲಿನಲ್ಲಿ ಮೆಟ್ರಿಕ್-ನಂತರದ ಕಾರ್ಯಕ್ರಮಗಳಡಿ ಬಿಡುಗಡೆಯಾಗಿ ಬ್ಯಾಂಕ್ ಖಾತೆಯಲ್ಲಿ ಜಮೆ ಮಾಡಿರುವ ಅನುದಾನದಲ್ಲಿ ಖರ್ಚಾಗಿ ಉಳಿಕೆಯಾಗುವ ಸುಮಾರು ರೂ.9886.04ಲಕ್ಷಗಳ ಮೊತ್ತವು ಬ್ಯಾಂಕ್ ಖಾತೆಯಲ್ಲಿ ಬಾಕಿ ಉಳಿದಿದ್ದು 2020-21ನೇ ಸಾಲಿನಲ್ಲಿ COMED-K ಮತ್ತು MANAGEMENT QUOTA ಅಡಿ ಆಯ್ಕೆಗೊಂಡು ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಅರ್ಹತೆಯಂತೆ ನಿಯಮಾನುಸಾರ ನೇರವಾಗಿ ಅವರ ಆಧಾರ ಜೋಡಣೆಯಾಗಿರುವ ಬ್ಯಾಂಕ್ ಖಾತೆಗೆ ಡಿಬಿಟಿ ಮೂಲಕ ಪಾವತಿಸಲು ಶುಲ್ಕ ಮರುಪಾವತಿಗೆ ಬಳಸಲು ಹಾಗೂ ಉಳಿಕೆ ಮೊತ್ತವನ್ನು 2021-22ನೇ ಸಾಲಿನ ಮೆಟ್ರಿಕ್-ಪೂರ್ವ ವಿದ್ಯಾರ್ಥಿವೇತನ ಕಾರ್ಯಕ್ರಮದಡಿ ನಿಯಮಾನುಸಾರ ಅರ್ಹತೆಯಂತೆ ನವೀಕರಣ ವಿದ್ಯಾರ್ಥಿಗಳಿಗೆ ನೇರವಾಗಿ ಅವರ ಆಧಾರ ಜೋಡಣೆಯಾಗಿರುವ ಬ್ಯಾಂಕ್ ಖಾತೆಗೆ ಡಿಬಿಟಿ ಮೂಲಕ ಪಾವತಿಸಲು ಅನುಮತಿ ನೀಡಿ ಆದೇಶಿಸಿದೆ.

14/03/22

--3